| | | | |
|---|---|---|---|
| **SRI BHAGAWAN MAHAVEER JAIN COLLEGE**<br>Vishweshwarapuram, Bangalore.<br>**Mock Exam - Feb.2017** | **Course:** | I PUC |
| | **Subject:** | KANNADA |
| | **Max. Marks:** | 100 |
| | **Duration:** | 3:00 |

## ಅ–ವಿಭಾಗ

**I ಒಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: 1 x 10 = 10**

1 ಜೀವ ಎಲ್ಲಿ ಅರಳಿದೆ?
2 ಹೊಲಿಗೆ ಯಂತ್ರದ ಜೊತೆಗೆ ಅಮ್ಮ ಕಳೆದ ಕಾಲವೆಷ್ಟು?
3 ಇರುಳ ಬಸಿರು ಬಗೆದು ಬರಬೇಕಾಗಿರುವುದು ಯಾವುದು?
4 ಮಾದೇವ ಎಲ್ಲಿ ಒರಗಿದ್ದಾನೆ?
5 ನರಿಗೆ ಏಕೆ ಆಶರ್ಯವುಂಟಾಯಿತು?
6 ಶಕುಂತಲೆಯ ತಾಯಿಯ ಹೆಸರೇನು?
7 ರಂಗರಾವ್ ಸ್ಥಾಪಿಸಿದ ಸಂಸ್ಥೆಯ ಹೆಸರೇನು?
8 ಕತ್ತಲೆಯ ನಿಜಜನಕ ಯಾರು?
9 ಹುಡುಗಿಯರಿಗೆ ಬೋಳೇಶಂಕರ ಬಹುಮಾನವಾಗಿ ಏನು ಕೊಡುವನು?
10 ಬೋಳೇಶಂಕರನ ಊರು ಯಾವುದು?

## ಆ–ವಿಭಾಗ

**II ಅ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 4 = 8**

11 ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?
12 ಸೀತೆ ಸೌಮಿತ್ರಿಯನ್ನು ಹಿಂತಿರುಗಿ ಹೋಗೆಂದು ಏಕೆ ಹೇಳಿದಳು?
13 ವೃಕ್ಷವನ್ನು ಆದಿಕೇಶವ ಹೇಗೆ ಸಲಹುತ್ತಾನೆ?
14 ರತ್ನ ಮತ್ತು ಮುತ್ತು ಏನನ್ನು ಸೂಚಿಸುತ್ತದೆ?
15 ಕರ್ಣನ ಜನ್ಮರಹಸ್ಯವನ್ನು ಯಾರುಯಾರು ಅರಿತಿದ್ದರು?

**ಆ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 3 = 6**

16 ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ?
17 ತಾವು ಓದಿದ ಹೈಸ್ಕೂಲ್ ನೆನಪು ಬಂದಾಗ ನಿರೂಪಕರಿಗೆ ಏನನಿಸಿತು?
18 ನಮ್ಮ ಯಾವ ಜಿಲ್ಲೆಗಳು ರಾಗಿಯ ಕಣಜಗಳಾಗಿವೆ?
19 ರಾಸಾಯನಿಕಗಳನ್ನು ತಿಂದು ಬೆಳೆಯುವ ಪ್ರಾಣಿಗಳಿಗೆ ಯಾವ ರೋಗಗಳು ಬರುತ್ತವೆ?

**ಇ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 3 = 6**

20 ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?
21 ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?
22 ಸೈತಾನನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23 ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?

## ಇ–ವಿಭಾಗ

**III ಅ ಎರಡನ್ನು ಕುರಿತು ಸಂದರ್ಭಸೂಚಿಸಿ ವಿವರಿಸಿ: 3 x 2 = 6**

24 ಧನವಿದ್ದರು ಇಂಧನ ಬೇಕಲ್ಲವೆ.
25 ಕಾಡುಕಣಿವೆ ಬೆಟ್ಟಗಳು ಮಾರ್ದನಿಸಲಿ.
26 ನೀವೊಪ್ಪುದಂಗೆ ಮಾಡುತೀವಿ.

**ಆ ಒಂದನ್ನು ಕುರಿತು ಸಂದರ್ಭಸೂಚಿಸಿ ವಿವರಿಸಿ: 3 x 1 = 3**

27 ಜೀತದ ಕೆಲಸ ಯಾರು ಮಾಡುತ್ತಾರೆ?
28 ಗವಾಕ್ಷಿಯಿಂದ ಮಗನನ್ನು ಕೂಗಿರಬಹುದು.

**ಇ ಒಂದನ್ನು ಕುರಿತು ಸಂದರ್ಭಸೂಚಿಸಿ ವಿವರಿಸಿ: 3 x 1 = 3**

29 ಬಂಧುಗಳೇ ಚರಿತ್ರೆ ಮುಂದೆ ಮುಂದೆ ಹೋಗುತ್ತದೆ ಹಿಂದೆಹಿಂದಲ್ಲ.

30 ಜನ ಎಲ್ಲಿ ಸೇರಿದರೆ ಅಲ್ಲೇದರ್ಬಾರು.

## ಈ–ವಿಭಾಗ

**IVಅ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 3 = 12**

31 ಜಗತ್ತು ತನ್ನನ್ನು ಕೀಳಾಗಿ ಕಂಡು ನಿರಾಕರಿಸುತ್ತಿರುವ ಬಗೆಯನ್ನು ಕವಿ ಹೇಗೆ ಚಿತ್ರಿಸಿದ್ದಾನೆ?

32 ಜಲಪ್ರಳಯದ ಪರಿಣಾಮಗಳನ್ನು ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

33 ಸೀತೆ ಹಿಂದಿನ ಘಟನೆಗಳನ್ನು ನೆನಪಿಸಿಕೊಂಡು ಹೇಗೆ ದುಃಖಿಸುತ್ತಾಳೆ?

34 ಸ್ವಾಭಿಮಾನದ ನಾಡನ್ನು ಕಟ್ಟುವಲ್ಲಿ ಕವಿಯು ಹೊಂದಿರುವ ಆಶಯಗಳನ್ನು ವಿವರಿಸಿ.

**ಆ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ವಿವರಿಸಿ: 4 x 2 = 8**

35 ಶಕುಂತಲೆ ತನ್ನ ಬದುಕನ್ನು ಅರ್ಥೈಸಿಕೊಂಡುದು ಹೇಗೆ?

36 ಭೂ ಸುಧಾರಣಾ ಕಾಯ್ದೆ ಎಂದರೇನು? ಅದರ ಪರಿಣಾಮಗಳೇನು ?

37 ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.

**ಇ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 2 = 8**

38 'ಹಸಿರೇ ಉಸಿರು' ಎಂಬುದನ್ನು ನಾಟಕದ ಮೂಲಕ ಸ್ಪಷ್ಟಪಡಿಸಿ.

39 ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ?

40 ಸೈನಿಕರು ಹಾಡಿದ ಸಿಟಿ ಹಾಡಿನ ಸಾರಾಂಶವೇನು?

## ಉ–ವಿಭಾಗ

**V ಅ ಒಂದು ಪದ್ಯದ ಭಾವಾರ್ಥ ಬರೆಯಿರಿ: 5 x 1 = 5**

41 ಇರುಳಂತೆ ಪಗಲಂತೆ ಮುಖದಂತೆ ದಿವದಂತೆ.
ವರ ಪಯೋನಿಧಿಯಂತೆ ಕೈಲಾಸಗಿರಿಯಂತೆ
ನಿರುತಮಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿನುತ ಶಿವಾವಾಸಮಾಗಿ
ಧುರದಂತೆ ಕೊಳದಂತೆ ಕಡಲಂತೆ ನಭದಂತೆ
ಶರಪುಂಡರೀಕ ವಿದ್ರುಮ ಋಕ್ಷಮಯದೊಳಿಡಿ
ದಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆಘೋರತರಮಾಗಿ ಮುಂದೆ.

42 ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ ! ಶಕ್ತಿಕಣಾ !
ತಾಯಿ ಕಣಾ ! ದೇವಿ ಕಣಾ !
ಬೆಂಕಿ ಕಣಾ ! ಸಿಡಿಲು ಕಣಾ !
ಕಾವ ಕೊಲುವ ಒಲದ ಬಲದ
ಪಡೆದ ಚಲದ ಚಂಡಿ ಕಣಾ

## ಊ–ವಿಭಾಗ

**ಆ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ: 2 x 6 = 12**

| | | | |
|---|---|---|---|
| 43 | **ಪದಗಳ ಅರ್ಥ ಬರೆಯಿರಿ:–** | ಬರಡು, | ಬೋಳೆ |
| 44 | **ಬಿಡಿಸಿ ಬರೆಯಿರಿ:–** | ದಿವ್ಯಾನ್ನ, | ಕಣ್ಣರಳಿಸು |
| 45 | **ತದ್ಭವಗಳನ್ನು ಬರೆಯಿರಿ:–** | ವರ್ತಿ, | ಕಾವ್ಯ |
| 46 | **ಗ್ರಾಂಥಿಕರೂಪ ಬರೆಯಿರಿ:–** | ಮೊಕ, | ದೇವೇಂದ್ರ |
| 47 | **ವಾಕ್ಯಗಳಲ್ಲಿ ಬಳಸಿ:–** | ಬಹುಮುಖಿ, | ಕಣ್ಮುಂದೆ |
| 48 | **ಸಮಾನಾರ್ಥಕಗಳನ್ನು :–** | ಕರ, | ಶಶಿ |
| 49 | **ನಾನಾರ್ಥಗಳನ್ನು ಬರೆಯಿರಿ :–** | ಮುನಿ | ಕರಿ |

**ಇ ಒಂದನ್ನು ಕುರಿತು ಪ್ರಬಂಧ ಬರೆಯಿರಿ: 5 x 1 = 5**

50 ಜೈವಿಕ ಇಂಧನದ ಅವಶ್ಯಕತೆ

51 ಪರೀಕ್ಷೆಗಳು.

**ಈ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ:– 4 x 1 = 4**

52 ಇತ್ತೀಚೆಗೆ ನೀವು ಭೇಟಿಕೊಟ್ಟ 'ವಿಶ್ವ ಪುಸ್ತಕ ಮೇಳ'ವನ್ನು ಕುರಿತಂತೆ ನಿಮ್ಮ ಗೆಳೆಯ / ಗೆಳತಿಗೊಂದು ಪತ್ರ ಬರೆಯಿರಿ.

53 ನೀವು ಬರೆದ ಲೇಖನವೊಂದನ್ನು ಪ್ರಕಟಿಸಲು ಕೋರಿ ಪತ್ರಿಕಾ ಸಂಪಾದಕರಿಗೊಂದು ಪತ್ರ ಬರೆಯಿರಿ.

**ಉ ಒಂದನ್ನು ವಿಸ್ತರಿಸಿ ಬರೆಯಿರಿ: 4 x 1 = 4**

54 ದುಡಿಮೆಯೇ ದೇವರು

55 ಕೆಟ್ಟಮೇಲೆ ಬುದ್ಧಿಬಂತು.

*******